ಶ್ರೀ ಡಿ. ಮೂಕಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ ಪರಿಶಿಷ್ಟದಲ್ಲಿ ಈ ತಾಲ್ಲೂಕಿನಲ್ಲಿ ಒಟ್ಟು 17 ನೀರಾವರಿ ಕಾಮಗಾರಿಗಳನ್ನು ಕೈಗೊಂಡಿದೆ ಎಂದು ಹೇಳಿದ್ದೀರಿ. ಅವುಗಳ ಪೈಕಿ ಎಷ್ಟು ಕಾಮಗಾರಿಗಳ ಕೆಲಸವನ್ನು ಪೂರೈಸಿದ್ದೀರಿ?

†ಶ್ರೀ ಎಂ. ಎನ್. ನಾಗನೂರ್.—17 ಕಾಮಗಾರಿಗಳ ಪೈಕಿ ಈಗಾಗಲೇ 10 ಕಾಮಗಾರಿಗಳಿಗೆ ಮಂಜೂರಾತಿ ಕೊಡಲಾಗಿದೆ. ಅವು ಬೇರೆ ಬೇರೆ ಹಂತದಲ್ಲಿವೆ. ಅಲ್ಲದೆ ಅನೇಕ ಕಾಮಗಾರಿಗಳು ಈಗಾಗಲೇ ಪುರು ಆಗಿವೆ. ಅದರ ಡೀಟೇಲ್ಸ್ ಬೇಕಾದರೆ ಈ ಸಭೆಯಲ್ಲಿ ಇಡುತ್ತೇನೆ. ಮಾನ್ಯನವನ್ಯರು ನೋಡಿಕೊಳ್ಳಬಹುದು.

ಶ್ರೀ ಡಿ. ಮೂಕಪ್ಪ.—ನಾಗರಗುಡಿಕೆರೆ ಮತ್ತು ಮೂಗಳಿ ಕೆರೆಗಳ ಜೀರ್ಣೋದ್ಧಾರ ಕ್ಕಾಗಿ ಜನಗಳ ಬೇಡಿಕೆಯಿದ್ದರೂ ಅದು ಇನ್ನೂ ಆಗದೇ ಇರುವುದರಿಂದ ಅಲ್ಲಿ ಬಹಳ ಜನಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಎನ್. ನಾಗನೂರ್.—ಈ ಯೋಜನೆಯೂ ಕೂಡ 17 ನೀರಾವರಿ ಕಾಮಗಾರಿ ಗಳಲ್ಲಿ ಸೇರಿದೆ. ಇದಕ್ಕೆ ಅದಷ್ಟು ಜಾಗ್ರತೆ ಮಂಜೂರಾತಿಯನ್ನು ಕೊಡಲಾಗುತ್ತದೆ.

ಶ್ರೀ ಡಿ. ಮೂಕಪ್ಪ.—ಎಷ್ಟು ದಿವಸಗಳಲ್ಲಿ ಈ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರಾ?

ಶ್ರೀ ಎಂ. ಎನ್. ನಾಗನೂರ್.—ಅದಷ್ಟು ಜಾಗ್ರತೆ ಇದನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

CONSTRUCTION OF BRIDGES AND CULVERTS IN TARIKERE TALUK.

*Q.—567. Sri D. MOOKAPPA [on behalf of Sri T. R. PARAMESWARAIAH (Tarikere)].—

Will the Government be pleased to state:—

(*a*) the number of bridges and culverts costing more than Rs. 25,000 proposed to be taken up in Tarikere taluk during the past 3 Years ;

(*b*) when these estimates were prepared;

(*c*) the reasons for the delay in sanction of these works ?

A.—Sri M. N. NAGHNOOR (Deputy Minister for Public Works)

(*a*) 14.

(*b*) Estimates were first prepared as follows :

1 in 1955–56;
1 in 1958–59;
4 in 1959–60;
6 in 1960–61;

One work is almost completed.

One work is recently proposed and estimates are being prepared.

(c) Delay is due to time taken in finalising the designs and plans, selection of sites, etc.

ಶ್ರೀ ಡಿ. ಮೂಕಪ್ಪ.—ಅಂದಾಜುಗಳು ತಯಾರಿಸಿದ್ದರೂ ಕೆಲಸ ಎಷ್ಟು ದಿವಸಗಳಿಂದ ತಡವಾಗಿ ನಿಂತಿದೆ.?

ಶ್ರೀ ಎಂ. ಎಸ್. ನಾಗನೂರ್.—ಉತ್ತರದಲ್ಲಿ ಆ ಪ್ರಶ್ನೆಗೆ ಜವಾಬು ಕೊಟ್ಟಿದೆ. ಮಾನ್ಯಸದಸ್ಯರು ಕಳೆದ 3 ವರ್ಷಗಳ ಅಂಕಿ ಅಂಶವನ್ನು ಕೇಳಿದ್ದರಿಂದ ಆ ಪ್ರಕಾರ ಉತ್ತರವನ್ನು ಈಗಾಗಲೇ ಒದಗಿಸಿದೆ. ಹಿಂದೆ ಕೆಲವು ನಾನ್ ಪಿ.ಡಬ್ಲ್ಯು.ಡಿ. ವರ್ಕ್ಸ್ ಪೈಕಿ 8 ಕಾಮಗಾರಿಗಳ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ಹೋದ ವರ್ಷವೇ ತಂದಿದ್ದರು. ಈ ವರ್ಷ ಒಂದು ಕಾಮಗಾರಿಯನ್ನು ಮಂಜೂರು ಮಾಡುತ್ತಿದ್ದೇವೆ.

ಶ್ರೀ ಡಿ. ಮೂಕಪ್ಪ.—ಈ ತಾಲ್ಲೂಕಿನಲ್ಲಿ ಸೇತುವೆ ಮತ್ತು ಅಡಿಗಾಲುವೆಗಳ ನಿರ್ಮಾಣ ಅತಿಮುಖ್ಯವಾದುದು ಎಂದು ಅಲ್ಲಿಯ ಜನಗಳು ಅವನ್ನು ಜಾಗ್ರತೆ ಮಾಡಿಕೊಡಬೇಕೆಂದು ಒತ್ತಾಯ ಮಾಡಿಲ್ಲವೇ ?

ಶ್ರೀ ಎಂ. ಎಸ್. ನಾಗನೂರ್.—ಅನೇಕ ಮನವಿಗಳು ಬಂದಿವೆ. ಈಗ ಮಾನ್ಯ ಸದಸ್ಯರೂ ಸಹ ಸೂಚನೆ ಕೊಟ್ಟಿದ್ದಾರೆ. ಅದರ ಬಗ್ಗೆ ನೂಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

Sri B. S. SHANKARAPPA.—Supplementary to (c): You have said that delay is due to time taken in finalising the designs and plans, selection of sites, etc. Will Government issue instructions that plans and designs should be finalised within a certain period to avoid such delays ?

Sri M. N. NAGHNOOR.—Government cannot lay down a hard and fast rule and stipulate the time because it depends upon various strata of soil and rock, but Government would be always directing their subordinates to get up the estimates as early as possible. Of late, we have established a Designs Division also in the Chief Engineer's Office to expedite the work.

ಶ್ರೀ ಡಿ. ಮೂಕಪ್ಪ.—ಈ ಯೋಚನೆ ಸ್ಥಳ ಪರಿಶೀಲನೆಯಿಂದ ನಿಧಾನವಾಗುತ್ತಿದೆಯೆಂದು ತಾವು ಹೇಳಿದಿರಿ. ಎಸ್ಟಿಮೇಟ್ ತಯಾರು ಮಾಡುವುದಕ್ಕೆ ಮುಂಚೆ ಸ್ಥಳ ಪರಿಶೀಲನೆಯಾಗಿದೆ ಈ ಯೋಜನೆ ಕಾರ್ಯಗತ ಮಾಡುವುದಕ್ಕೆ ಮುಂಚೆ ಅಂದಾಜು ಮಂಜೂರಾಗಿತ್ತೆಂಬುದು ನಿಜವೇ ?

ಶ್ರೀ ಎಂ. ಎಸ್. ನಾಗನೂರ್.—ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ.

CONSTRUCTION OF BUILDING FOR VETERINARY HOSPITAL AT LAKKAVALLI.

*Q.—570. Sri D. MOOKAPPA [on behalf of Sri T. R. PARAMESWARIAH (Tarikere)].—

Will the Government be pleased to state :—

(a) whether Veterinary Hospital at Lakkavalli is now run in one of the blocks of Travellers' Bungalow, belonging to Taluk Board ;

(b) when the estimate for construction of building for Veterinary Hospital was prepared and submitted for sanction ?